# ಗರ್ಭಕೊರಳಿನ ಕ್ಯಾನ್ಸರ್‌ಗೆ ಬಂದಿದೆ ವ್ಯಾಕ್ಸಿನ್

ಗರ್ಭಕೊರಳಿನ ಕ್ಯಾನ್ಸರ್ ಮಹಿಳೆಯರನ್ನು ಕಾಡುವ ಅತಿದೊಡ್ಡ ಸಮಸ್ಯೆ. ಎಳೆಯ ವಯಸ್ಸಿನ ಹೆಣ್ಣುಮಕ್ಕಳಿಂದ ಹಿಡಿದು ಮುದುಕಿಯವರೆಗೂ ಈ ಕ್ಯಾನ್ಸರ್ ಯಾವ ಹಂತದಲ್ಲಾದರೂ ಬರಬಹುದು. ಹ್ಯೂಮನ್ ಪ್ಯಾಪಿಲೋಮಾ ವೈರಸ್ ಸೋಂಕಿನಿಂದ ಬರುವ ಈ ರೋಗದ ನಿವಾರಣೆಗೆ ಇದೀಗ ಉತ್ತಮ ವ್ಯಾಕ್ಸಿನೇಷನ್ ಬಂದಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಇದನ್ನು ಹಾಕಿಸಿಕೊಳ್ಳುವುದು ಒಳಿತು.

■ ಡಾ. ವೀಣಾ ಭಟ್, ಭದ್ರಾವತಿ



ಮಹಿಳೆಯರನ್ನು ಕಾಡುವ ಕ್ಯಾನ್ಸರ್‌ಗಳಲ್ಲಿ ಗರ್ಭಕೊರಳಿನ ಅಥವಾ ಸರ್ವೈಕಲ್ ಕ್ಯಾನ್ಸರ್ ಪ್ರಮುಖವಾದದ್ದು. ಇದರ ತಡೆಗೆ ಹಾಗೂ ಮುನ್ನೆಚ್ಚರಿಕಾ ಕ್ರಮವಾಗಿ ಇದೀಗ ಉತ್ತಮ ವ್ಯಾಕ್ಸಿನ್ ಲಭ್ಯವಿದ್ದು, ಮಹಿಳೆಯರು ಇದನ್ನು ಹಾಕಿಸಿಕೊಂಡರೆ ಅಪಾಯದಿಂದ ಪಾರಾಗಬಹುದು.

ಎಚ್.ಪಿ.ವಿ ಒಂದು ಡಿ.ಎನ್.ಎ ವೈರಸ್ ಆಗಿದ್ದು ಲೈಂಗಿಕವಾಗಿ ಸಕ್ರಿಯವಾಗಿರುವವರಲ್ಲಿ ತಮ್ಮ ಜೀವಿತಾವಧಿಯಲ್ಲಿ ಒಂದಲ್ಲಾ ಒಂದು ಬಾರಿ ಇದರ ಸೋಂಕಿಗೊಳಗಾಗುತ್ತಾರೆ. ಈ ವೈರಸ್‌ನಲ್ಲಿ ಸುಮಾರು 200 ವಿಧಗಳಿದ್ದು ಹೆಚ್ಚಿನ ಬಾರಿ ಸೋಂಕುಂಟಾದಾಗ ಯಾವುದೇ ರೋಗಲಕ್ಷಣಗಳನ್ನು ಉಂಟು ಮಾಡದೆ ಶೇ.90ರಷ್ಟು ಸಂದರ್ಭಗಳಲ್ಲಿ ತಾವೇ ತಾನಾಗಿ ಸೋಂಕು ಕಡಿಮೆಯಾಗುತ್ತದೆ. ಎಚ್.ಪಿ.ವಿ ಸೋಂಕು 16 ಮತ್ತು 18 ವಿಧದ ವೈರಸ್ ಸರ್ವೈಕಲ್ ಕ್ಯಾನ್ಸರ್ ಉಂಟು ಮಾಡುವುದು ಸಾಬೀತಾಗಿದೆ. ಶೇ.70ರಷ್ಟು ಜನರಲ್ಲಿ ಸೋಂಕಿಗೆ ಕಾರಣ ಈ ಎರಡು ವಿಧದ ವೈರಸ್ ಆಗಿದೆ. ಇನ್ನೂ ಎಚ್.ಪಿ.ವಿ ಟೈಪ್ 31, 33, 45, 52, 58 ಈ ವಿಧದ ವೈರಸ್‌ಗಳು ಶೇ.30ರಷ್ಟು ಸಂದರ್ಭಗಳಲ್ಲಿ ಕ್ಯಾನ್ಸರನ್ನು ಉಂಟು ಮಾಡಬಹುದು. ಟೈಪ್ 6 ಹಾಗೂ 11 ಜನನಾಂಗದ ನರೋಲಿ (ಜನ್ಯೆಟರ್ ವಾರ್ಟ್) ಉಂಟು ಮಾಡುತ್ತದೆ. ಪುರುಷರಲ್ಲಿಯೂ ಇವು ಬಾಯಿ, ಗುದದ್ವಾರ, ಶಿಶ್ನದ ಕ್ಯಾನ್ಸರ್ ಉಂಟು ಮಾಡುತ್ತದೆ.

ಇಂದು ಮಹಿಳೆಯರಲ್ಲಿ ಗರ್ಭಕೊರಳಿನ (ಸರ್ವೈಕಲ್) ಕ್ಯಾನ್ಸರ್ ನಮ್ಮ ಭಾರತವೂ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಹೆಚ್ಚು ಸಾವನ್ನುಂಟು ಮಾಡುತ್ತಿರುವುದರಿಂದ ಕೆಲವು ರಾಷ್ಟ್ರಗಳಲ್ಲಿ ಈ ಎಚ್.ಪಿ.ವಿ ವ್ಯಾಕ್ಸಿನನ್ನು ರಾಷ್ಟ್ರೀಯ ಪ್ರತಿರಕ್ಷಣಾ ವೇಳಾಪಟ್ಟಿ (ನ್ಯಾಷನಲ್ ಇಮ್ಯೂನೈಸೇಷನ್ ಶೆಡ್ಯೂಲ್) ಯಲ್ಲಿ ಸೇರಿಸಿ ಲೈಂಗಿಕವಾಗಿ ಸಕ್ರಿಯವಾಗುವ ಮೊದಲೇ ಇದನ್ನು ಸೇರಿಸಲಾಗುತ್ತದೆ.

ಎಚ್.ಪಿ.ವಿ ವ್ಯಾಕ್ಸಿನ್ ಅಂದರೆ ಹ್ಯೂಮನ್ ಪ್ಯಾಪಿಲೋಮಾ ವೈರಸ್‌ನ ಕೆಲವು ವಿಧದ ಸೋಂಕಿನ ವಿರುದ್ಧ ಮಾತ್ರ ರಕ್ಷಣೆ ಕೊಡುತ್ತದೆ. ಪ್ರಸ್ತುತ 3 ತರಹದ ವ್ಯಾಕ್ಸಿನ್ ದೊರೆಯುತ್ತಿದೆ.

ಮೊದಲನೆಯದಾಗಿ: ಸರ್ವಿರಾಕ್ಸ್ ವ್ಯಾಕ್ಸಿನ್ (ಬೈವಲೆಂಟ್)– ಈ ವ್ಯಾಕ್ಸಿನ್ ಗರ್ಭಕೊರಳಿನ ಕ್ಯಾನ್ಸರನ್ನು ಸಾಮಾನ್ಯವಾಗಿ ಉಂಟು ಮಾಡುವ 16 ಮತ್ತು 18ನೇ ಟೈಪ್ ಎಚ್.ಪಿ.ವಿ ಸೋಂಕಿನ ವಿರುದ್ಧ ರಕ್ಷಣೆ ಕೊಡುತ್ತದೆ. ಇದನ್ನು ಮಹಿಳೆಯರಿಗೆ ಮಾತ್ರ ಹಾಕಲಾಗುವುದು.

ಎರಡನೆಯದಾಗಿ: ಗರ್ಡಾಸಿಲ್ ವ್ಯಾಕ್ಸಿನ್ (ಟೆಟ್ರಾವಲೆಂಟ್)– ಇದು ಎಚ್.ಪಿ.ವಿ ಟೈಪ್ 16, 18, 6, 11 ಈ ನಾಲ್ಕು ವಿಧದ ಸೋಂಕಿನ ವಿರುದ್ಧ (ಗರ್ಭಕೊರಳಿನ ಕ್ಯಾನ್ಸರ್ ಮತ್ತು ಜನನಾಂಗದ ನರೋಲಿ) ರಕ್ಷಣೆ ಕೊಡುತ್ತದೆ. ಇದನ್ನು ಮಹಿಳೆ ಹಾಗೂ ಪುರುಷರಿಬ್ಬರಿಗೂ ಹಾಕಲಾಗುವುದು.

ಮೂರನೆಯದಾಗಿ: ಗರ್ಡಾಸಿಲ್ 9 (9 ವಲೆಂಟ್)– ಇದು ಈ ಮೇಲಿನ ನಾಲ್ಕು ವಿಧದ ವೈರಸ್ ಜೊತೆಗೆ ಈ ಎಚ್.ಪಿ.ವಿ ಟೈಪ್ 31, 32, 35, 52, 58 ಸೋಂಕಿನ (ಗರ್ಭಕೊರಳಿನ ಕ್ಯಾನ್ಸರ್, ಗೊಲ್ಲಿ ಹಾಗೂ ಯೋನಿಯ ಕ್ಯಾನ್ಸರ್, ಇತ್ಯಾದಿ) ವಿರುದ್ಧ ರಕ್ಷಣೆ ದೊರಕಿಸುತ್ತದೆ. ಇದು ಮಹಿಳೆ ಹಾಗೂ ಪುರುಷರಿಬ್ಬರಿಗೂ ಹಾಕಲಾಗುವುದು.

### ವ್ಯಾಕ್ಸಿನ್ ಬಗೆಗಿರುವ ಆತಂಕಗಳೇನು?

ಸರ್ವಿಯಾರ್ಕ್ಸಿನ್ ವ್ಯಾಕ್ಸಿನ್ ಕೇವಲ ಶೇ.70ರಷ್ಟು ಹೆಚ್.ಪಿ.ವಿ ಸೋಂಕಿನ ವಿರುದ್ಧ ರಕ್ಷಣೆ ಕೊಡುತ್ತದೆಯೇ ಹೊರತು, ಬೇರೆ ಲೈಂಗಿಕ ಸೋಂಕಿನ ವಿರುದ್ಧ ಯಾವುದೇ ರಕ್ಷಣೆಯನ್ನು ಕೊಡುವುದಿಲ್ಲ.

ಎಚ್.ಪಿ.ವಿ ಸೋಂಕಿಗೊಳಗಾದ ಎಲ್ಲರಲ್ಲೂ ಗರ್ಭಕೊರಳಿನ ಜೀವಕೋಶದಲ್ಲಿ ಕ್ಯಾನ್ಸರ್‌ನ ಪೂರ್ವ ಚಿಹ್ನೆಯ ಬದಲಾವಣೆ ತರದೇ ಇರಬಹುದು. ಈಗಾಗಲೇ ಎಚ್.ಪಿ.ವಿ ಸೋಂಕಿನಿಂದ ಬಳಲುತ್ತಿದ್ದರೆ, ಈಗಾಗಲೇ ಸರ್ವೈಕಲ್ ಕ್ಯಾನ್ಸರ್